# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–152 ಎಸ್.ಜಿ.ಪಾಳ್ಯ

## ಕಛೇರಿಯಲ್ಲಿ ದಿನಾಂಕ: 07.11.2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–07–11–2020ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ–152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632711740 |
| 4 | ಶ್ರೀ. ಎನ್.ಓಬಳೇಶ್,ಹಿರಿಯ ಆರೋಗ್ಯಾ ಪರಿವೀಕ್ಷಕರು | 9945042307 |
| 5 | ಶ್ರಿ ನವೀನ್ ಎಸ್. ಕಂದಾಯ ಪರಿವೀಕ್ಷಕರು | 9902388885 |
| 6 | ಶ್ರೀ. ಸೆಲ್ವ ಕುಮಾರ್ ಟಿ.ಐ | 9686301457 |
| 7 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 8 | ಶ್ರೀ ಜಯರಾಮ ಹೆಚ್.ಸಿ, ಎ.ಇ.ಇ ಬೇಸ್ಕಾಂ | 8277893193 |
| 9 | ಶ್ರೀ. ಕೃಷ್ಣ.ಸಿ ಕೆಲಸ ಪರಿವೀಕ್ಷರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9845768405 |
| 10 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 11 | ಶ್ರೀ.ಕೆ.ಎನ್ ರಮೇಶ್ | 9731108622 |
| 12 | ಶ್ರೀ. ಮಂಜುನಾಥ ವಾರ್ಡ್ ಮೇಲ್ವಿಚಾರಕರು | 9740903427 |
| 13 | ಶ್ರೀ.ಗೋಣಿ ಬಸಪ್ಪ ಸಹಾಯಕ ಅಭಿಯಂತರರು ಬೇಸ್ಕಾಂ | 9449840448 |
| 14 | ಶ್ರೀ ಜಿನ್‌ಸನ್ ಕೆ.ಜೆ, ಮುಖ್ಯಸ್ಥರು ಭುವನಪ್ಪ & ಕಾವೇರಿ ಬಡಾವಣೆ | 9886263222 |
| 15 | ಶ್ರೀ ಸೈಯದ್ ನಜರುದ್ದೀನ್ ಬಾಲಾಜಿನಗರ | 9741518897 |
| 16 | ಶ್ರೀ.ಬಿ.ವಿಶ್ವಕುಮಾರ್. ಮಾರುತಿನಗರ | 9845371963 |
| 17 | ಶ್ರೀ. ಬಿ.ಟಿ.ಕೃಷ್ಣಮೂರ್ತಿ ಭಾರತಿ ಬಡಾವಣೆ | 9886339044 |
| 18 | ಶ್ರೀ ನಾಗರಾಜ ಎಸ್.ಐ ಮಡಿವಾಳ ಪೊಲೀಸ್ ಠಾಣೆ | 9902206329 |
| 19 | ಶ್ರೀ.ಕೆ.ವೆಂಕಟೇಶ್ ಬಾಬು ಎ.ಎಸ್.ಐ ಟ್ರಾಫಿಕ್ | 9448684480 |
| 20 | ಶ್ರೀ.ಗಂಗಾದ್ರಿ ಮೇಲ್ವಿಚಾರಕರು ಘನತ್ಯಾಜ್ಯ | 9980225272 |
| 21 | ಶ್ರೀ.ಮುನೀಂದ್ರ ಮೇಲ್ವಿಚಾರಕರು ಘನತ್ಯಾಜ್ಯ | 9901002067 |
| 22 | ಶ್ರೀ.ಲೋಕೇಶ್ ಎಸ್.ಜಿ.ಪಾಳ್ಯ | 9448579144 |

1) ಬಿದಿ ದೀಪಗಳ ನಿರ್ವಹಣೆ ಬಗ್ಗೆ.

ಶ್ರೀ.ಲೋಕೇಶ್‌ರವರು ಮಾತನಾಡಿ ಚಿಕ್ಕಾಡುಗೋಡಿ, ಸೆಂಟ್‌ಜಾನ್ಸ್ ವಸತಿ ಗೃಹದ ಪಾದಚಾರಿ ಮಾರ್ಗಗಳಲಿ ಬೀದಿ ದೀಪಗಳಿಗೆ ಲೈಟ್ ಫಿಟಿಂಗ್ಸ್ ಇಲ್ಲದಿರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ಸೆಂಟ್‌ಜಾನ್ಸ್ ಸಿಗ್ನಲ್ ಹತ್ತಿರ ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ದೂರಿರುತ್ತಾರೆ

ಈ ಬಗ್ಗೆ, ಬಿ.ಬಿ.ಎಂ.ಪಿ ವಿದ್ಯುತ್ ವಿಭಾಗರವರಿಂದ ಶ್ರೀ ಜ್ಞಾನೇಶರವರು ಮಾತನಾಡಿ ದಿನಾಂಕ: 14.11.2020ರ ಒಳಗಾಗಿ ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

ಈ ಸಂಬಂಧ ಸೂಕ್ತಕ್ರಮ ಕೈಗೊಳ್ಳಲು ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

2) ಘನತ್ಯಾಜ್ಯ ನಿರ್ವಹಣೆ ಬಗ್ಗೆ.

ಕಳೆದ ಸಮಿತಿ ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳ ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ಟ್ರಾನ್ಸ್‌ಫಾರ್ಮರ್ ಸ್ಥಳದಲ್ಲಿ ಕಸವನ್ನು ಸ್ವಚ್ಛಗೊಳಿಸಲು ತಿಳಿಸಿರುತ್ತಾರೆ. ಅದರಂತೆ ಕಿರಿಯ ಆರೋಗ್ಯ ಪರಿವೀಕ್ಷರವರಿಂದ ಸದರಿ ಜಾಗವನ್ನು ಸ್ವಚ್ಛಗೊಳಿಸಲಾಗಿರುತ್ತದೆ.

ಕಳೆದ ಸಭೆಯಲ್ಲಿ ಸಭೆಯ ಅಧ್ಯಕ್ಷಿತರಾದ ಶ್ರೀ.ಎಸ್.ಪ್ರಭಾಕರ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿನ ವಾಣಿಜ್ಯ ತ್ಯಾಜ್ಯ ಸಂಗ್ರಹಣೆ ವಿವರಗಳನ್ನು ಶ್ರೀ.ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸಿರುತ್ತಾರೆ ಹಾಗೂ ವಾರ್ಡ್ ವ್ಯಾಪ್ತಿಯ ವಾಣಿಜ್ಯ ಒಣ ಮತ್ತು ಹಸಿ ಕಸವನ್ನು ಸಮರ್ಪಕವಾಗಿ ವಿಂಗಡಣೆ ಮಾಡದಿರುವ ಬಗ್ಗೆ ತಿಳಿಸಿರುತ್ತಾರೆ.

ಈ ಸಂಬಂಧ ಶ್ರೀ ಓಬಳೇಶ್ ರವರಿಗೆ ಕಳೆದ ಸಭೆಯಲ್ಲಿ ಕೇಳಲಾಗಿದ್ದ ವಿವರವನ್ನು ಸಲ್ಲಿಸಲಾಗಿರುವುದಿಲ್ಲ ಎಂದು ವಿಷಾದವ್ಯಕ್ತಪಡಿಸಿ ಮುಂದಿನ ಸಭೆಯಲ್ಲಿ ತಪ್ಪದೇ ವಾಣಿಜ್ಯ ತ್ಯಾಜ್ಯ ಸಂಗ್ರಹಣೆ ವಿವರಗಳನ್ನು ಸಲ್ಲಿಸಲು ಸೂಚಿಸಲಾಗಿದೆ.

3) ಬೇಸ್ಕಾಂ ಇಲಾಖೆಯ ಬಗ್ಗೆ.

ಸಭೆಯ ಅಧ್ಯಕ್ಷರು ಮಾತನಾಡಿ ತಾವರೆಕೆರೆ ಮುಖ್ಯರಸ್ತೆಯಲ್ಲಿ ವಿದ್ಯುತ್ ವೈರ್‌ಗಳು ಕಂಬದ ಆಚೆ ಬಂದಿರುವುದರಿಂದ ಅವಘಡಗಳಾಗುವ ಸಂಭವವಿರುತ್ತದೆ. ಆದುದರಿಂದ ಕೂಡಲೇ ಸದರಿ ಪ್ರದೇಶದ ವಿದ್ಯುತ್ ಕಂಗಳನ್ನು ಗುರುತಿಸಿ ದುರಸ್ಥಿ ಪಡಿಸಲು ಸೂಚಿಸಿರುತ್ತಾರೆ ಹಾಗೂ ಟ್ರಾನ್ಸ್‌ಫಾರ್ಮರ್ ಒಳಗಡೆ ಡೆಬರೀಸ್ ಇರುವುದು ಕಂಡುಬಂದಿದ್ದು, ಟ್ರಾನ್ಸ್‌ಫಾರ್ಮರ್‌ಗಳನ್ನು ಆಸಮಯಕ್ಕೆ ಸ್ಥಗಿತಗೊಳಿಸಿದರೆ ಪಾಲಿಕೆ ಇಂಜನಿಯರಿಂಗ್ ವಿಭಾಗರವರು ಡೆಬರೀಸ್‌ಗಳನ್ನು ತೆರವುಗೊಳಿಸುತ್ತಾರೆ ಎಂದು ತಿಳಿಸಿದರು ಮತ್ತು ತಾವರೆಕೆರೆ ಮುಖ್ಯರಸ್ತೆ ಹೆಲ್ತ್ ಇಂಡಿಯಾ ಆಸ್ಪತ್ರೆಯ ಮುಂಭಾದ ಚರಂಡಿಯ ಮದ್ಯದಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಿರುತ್ತಾರೆ. ಇದರಿಂದ ಚರಂಡಿ ನೀರು ಸರಾಗವಾಗಿ ಹರಿಯದೇ ಕಸ ಮತ್ತು ಇತರೆ ಅವಶೇಷಗಳಿಂದ ಕಟ್ಟಿ ನೀರು ರಸ್ತೆಯಲ್ಲಿ ಹರಿಯುತ್ತಿರುತ್ತದೆ. ಈ ಸಂಬಂಧ ಟ್ರಾನ್ಸ್‌ಫಾರ್ಮರ್‌ನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸುವ ಕುರಿತು ಬೇಸ್ಕಾಂ ಇಲಾಖೆ ಮತ್ತು ಪಾಲಿಕೆ ಅಭಿಯಂತರರು ಜಂಟಿಯಾಗಿ ತಪಾಸಣೆ ನಡೆಸಿ ಮುಂದಿನ ಸಭೆಯಲ್ಲಿ ವರದಿ ಸಲ್ಲಿಸಲು ತಿಳಿಸಲಾಯಿತು.

4) ರಸ್ತೆ ಮೂಲಭೂತ ಸೌಕರ್ಯ:

ಸಭೆಯ ಅಧ್ಯಕ್ಷಿತರಾದ ಶ್ರೀ.ಎಸ್.ಪ್ರಭಾಕರ್ ರವರು ತಾವರೆಕೆರೆ ಮುಖ್ಯರಸ್ತೆಯನ್ನು ಡಾಂಬರೀಕರಣ ಕಾಮಗಾರಿಯನ್ನು ಕೈಗೊಳ್ಳಲು ಶ್ರೀ.ರಾಮಸುಭ್ರಮಣ್ಯ ರಸ್ತೆ ಮೂಲಭೂತ ಸೌಕರ್ಯ ಅಭಿಯಂತರರು ರವರಿಗೆ ತಿಳಿಸಲಾಯಿತು.

ಈ ಸಂಬಂಧ ಶ್ರೀ.ರಾಮಸುಭ್ರಮಣ್ಯ ರಸ್ತೆ ಮೂಲಭೂತ ಸೌಕರ್ಯ ಅಭಿಯಂತರರು ಮಾತನಾಡಿ ಸದರಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಸರ್ಕಾರ ಮಟ್ಟದಲ್ಲಿ ಪ್ರಗತಿಯಲ್ಲಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ತಿಳಿಸಿದರು

ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ಮೇಲ್ವಿಚಾರಕರು ಮಾತನಾಡಿ, ಪೌರಕಾರ್ಮಿಕರಿಗೆ ರಸ್ತೆ ಕಸ ಗುಡಿಸಲು ಪಾಲಿಕೆ ವತಿಯಿಂದ ಪೊರಕೆಗಳು ನೀಡುತ್ತಿರುವುದಿಲ್ಲ ಮತ್ತು ಆಟೋ ಟಿಪ್ಪರ್‌ಗಳ ಸಿಬ್ಬಂದಿಗೆ ಸಂಬಳ ನೀಡುತ್ತಿರುವುದಿಲ್ಲ ಎಂದು ದೂರಿರುತ್ತಾರೆ.

ಈ ಸಂಬಂಧ ಅಧ್ಯಕ್ಷರು ಮಾತನಾಡಿ, ಘನತ್ಯಾಜ್ಯ ನಿರ್ವಹಣೆ ವಿಭಾಗದ ಅಧೀಕ್ಷಕ ಅಭಿಯಂತರರು (ದಕ್ಷಿಣ)ರವರೊಂದಿಗೆ ಮಾತನಾಡಿ ಈ ವಿಷಯದ ಕುರಿತು ಬಗೆಹರಿಸುವುದಾಗಿ ತಿಳಿಸಿರುತ್ತಾರೆ

ಕೊನೆಯದಾಗಿ, ಅಧ್ಯಕ್ಷರು ಮಾತನಾಡಿ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್-152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ-ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ